# ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ.ಗಳ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

**ಸಿ.ಸಿ. 1034/2017**

1) ಕರ್ನಾಟಕ ಸರಕಾರ ಪರ ತಂಬ್ರಹಳ್ಳಿ ಪೋ.ಠಾಣೆ

- ಫಿರ್ಯಾದಿ

- ವಿರುದ್ಧ –

1) ಸಂಗಪ್ಪ ಅಃ ಸೊಬಾನಿ ಸಂಗಪ್ಪ

- ಆರೋಪಿ

## ಃ ದೋಷಾರೋಪಣೆ ಃ

ಹಗರಿಬೊಮ್ಮನಹಳ್ಳಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ಶ್ರೀ ವಿಜಯಕುಮಾರ್.ಎಸ್.ಜಟ್ಲಾ, ಬಿ.ಎಸ್.ಸಿ, ಎಲ್ಎಲ್.ಬಿ., ಆದ ನಾನು ಆರೋಪಿಯಾದ ನಿನ್ನ ಮೇಲೆ ಅಂದರೆಃ-

1) ಸಂಗಪ್ಪ ಅಃ ಸೋಬಾನಿ ಸಂಗಪ್ಪ,
ವಯಸ್ಸುಃ 26 ವರ್ಷ, ಉದ್ಯೋಗ ಃ ಒಕ್ಕಲುತನ
ಸಾಃ ಬನ್ನಿಕಲ್ಲು ಗ್ರಾಮ, ಹೆಚ್.ಬಿ.ಹಳ್ಳಿ ತಾ, ಬಳ್ಳಾರಿ ಜಿಲ್ಲೆ.

ನಿನ್ನ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ ಃ

ಹ.ಬೊ.ಹಳ್ಳಿ ತಾಲ್ಲೂಕಿನ ತಂಬ್ರಹಳ್ಳಿ ಪೊಲೀಸ್ ಠಾಣಾ ಸರಹದ್ದಿನ ಬನ್ನಿಕಲ್ಲು ಗ್ರಾಮದಲ್ಲಿ ದಿನಾಂಕಃ 11-03-2017 ರಂದು ಸಂಜೆ 6-30 ಗಂಟೆ ಸುಮಾರಿಗೆ ಸಾಕ್ಷಿ-1 ಮಮತಾಳು ತನ್ನ ಮನೆಯ ಹಿತ್ತಲದಲ್ಲಿ ಹಾಕಿದ್ದ ಪ್ಲಾಸ್ಟಿಕ್ ಹಾಳೆಯ ಆರೋಪಿಯಾದ ನಿನ್ನ ಮನೆಯ ಬಳಿ ಬಿದ್ದಿದ್ದನ್ನು ತೆಗೆದುಕೊಂಡು ಬರಲು ಹೋದಾಗ ಆರೋಪಿಯಾದ ನೀನು ಸಾಕ್ಷಿ-1 ಮಮತಾಳಿಗೆ "ಲೇ ತುಡುಗು ಸೂಳೇ ಮಿಂಡ್ರಿಗೆ ಹುಟ್ಟಿದವಳೇ ನಮ್ಮ ಮನೆಯ ಹತ್ತಿರ ಏಕೆ ಬಂದೆ" ಅಂತಾ ಅವಾಚ್ಯಶಬ್ಧಗಳಿಂದ ಬೈದ್ದಾಡಿದ್ದು, ಈ ನಿಮ್ಮ ಕ್ರಮವು ಭಾ.ದಂ.ಸಂ.ಕಲಂ 504 ರ ಪ್ರಕಾರ ಶಿಕ್ಷಿಸಲ್ಪಡುವ ಅಪಾಧನೆಯನ್ನು ಈ ನ್ಯಾಯಾಲಯ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀನು ಸಾಕ್ಷಿ-1 ಮಮತಾಳಿಗೆ ಅವಾಚ್ಯಶಬ್ಧಗಳಿಂದ ಬೈದಾಡಿದಲ್ಲದೆ ಸದರಿಯವಳ ಕಪಾಳಕ್ಕೆ ಕೈಯಿಂದ ಹೊಡೆದಿದ್ದು ಹಾಗೂ ಸದರಿ ಜಗಳವನ್ನು ಬಿಡಿಸಲು ಬಂದ ಸಾಕ್ಷಿ-4 ನಂಜುಡಪ್ಪನಿಗೂ ಸಹ ಕೈಯಿಂದ

ಕಪಾಳಕ್ಕೆ ಹೊಡೆದಿದ್ದು ಮತ್ತು ಸಾಕ್ಷಿ-5 ಲಲಿತಮ್ಮಳಿಗೂ ಸಹ ಬಲ ಮುಂಗೈ ಹತ್ತಿರ ಕೈಯಿಂದ ಹೊಡೆದು ಸಾದಾ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಈ ನಿಮ್ಮ ಕ್ರಮವು ಭಾ.ದಂ.ಸಂ.ಕಲಂ 323 ರ ಪ್ರಕಾರ ಶಿಕ್ಷಿಸಲ್ಪಡುವ ಅಪಾಧನೆಯನ್ನು ಈ ನ್ಯಾಯಾಲಯ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀನು ಸಾಕ್ಷಿ-1 ಮಮತಾಳ ಮೈ-ಕೈ ಮುಟ್ಟಿ ಸದರಿಯವಳ ಮೇಲೆ ಅತ್ಯಾಚಾರ ಮತ್ತು ಹಲ್ಲೆ ಎಸಗುವ ಉದ್ದೇಶದಿಂದ ಸದರಿಯವಳು ತೊಟ್ಟಿದ್ದ ನೈಟಿಯನ್ನು ಹರಿದು ಮಾನಭಂಗ ಮಾಡಲು ಪ್ರಯತ್ನಿಸಿದ್ದು, ಈ ನಿಮ್ಮ ಕ್ರಮವು ಭಾ.ದಂ.ಸಂ.ಕಲಂ 354 ರ ಪ್ರಕಾರ ಶಿಕ್ಷಿಸಲ್ಪಡುವ ಅಪಾಧನೆಯನ್ನು ಈ ನ್ಯಾಯಾಲಯ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ನಾಲ್ಕನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀನು ಸಾಕ್ಷಿ-1 ಮಮತಾಳ ಮೈ-ಕೈ ಮುಟ್ಟಿ ಸದರಿಯವಳು ತೊಟ್ಟಿದ್ದ ನೈಟಿಯನ್ನು ಹರಿದಿದ್ದಲ್ಲದೆ ಸದರಿಯವಳ ಮೇಲೆ ಬಲಪ್ರಯೋಗ ಮಾಡಿದ್ದು, ಈ ನಿಮ್ಮ ಕ್ರಮವು ಭಾ.ದಂ.ಸಂ.ಕಲಂ 354(ಬಿ)ರ ಪ್ರಕಾರ ಶಿಕ್ಷಿಸಲ್ಪಡುವ ಅಪಾಧನೆಯನ್ನು ಈ ನ್ಯಾಯಾಲಯ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಐದನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀನು ಸಾಕ್ಷಿ-1 ಮಮತಾಳಿಗೆ ಹಾಗೂ ಜಗಳ ಬಿಡಿಸಲು ಬಂದ ಸಾಕ್ಷಿ-7 ಚಲುವಾದಿ.ಎಸ್.ಹಂಬಪ್ಪ ಮತ್ತು ಸಾಕ್ಷಿ-8 ಬಸವಲಿಂಗಪ್ಪನಿಗೆ "ನೀವು ಊರಲ್ಲಿ ಹೇಗೆ ಜೀವನ ಮಾಡುತ್ತೀರೋ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲ" ಅಂತ ಜೀವದ ಬೆದರಿಕೆ ಹಾಕಿದ್ದು, ಈ ನಿಮ್ಮ ಕ್ರಮವು ಭಾ.ದಂ.ಸಂ.ಕಲಂ 506 ರ ಪ್ರಕಾರ ಶಿಕ್ಷಿಸಲ್ಪಡುವ ಅಪಾಧನೆಯನ್ನು ಈ ನ್ಯಾಯಾಲಯ ಸಂಜ್ಞಾನದಲ್ಲಿ ಎಸಗಿರುತ್ತೀರಿ.

(ವಿಜಯ್ ಕುಮಾರ್.ಎಸ್.ಜಟ್ಲಾ)
ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಹ ಬೊ ಹಳ್ಳಿ.

ಆರೋಪಿತನ ಹೆಸರು ಃ ಸಂಗಪ್ಪ ಅಃ ಸೊಬಾನಿ ಸಂಗಪ್ಪ,

ಪ್ರ ಃ 1) ಈಗ ನಿನಗೆ ಓದಿ ಹೇಳಿದ ನಿನ್ನ ಮೇಲಿನ ದೋಷಾರೋಪಣೆಯನ್ನು ನೀನು ಕೇಳಿದಿಯಾ?

ಉತ್ತರ ಃ

ಪ್ರ ಃ 2) ನೀನು ಸದರಿ ಗುನ್ನೇ ಕಬೂಲಿ ಮಾಡುವಿಯಾ? ಅಥವಾ ವಿಚಾರಣೆ ನಡೆಸಬೇಕೆ ? ಹೇಗೆ?

ಉತ್ತರ ಃ

(ಈ ಮೇಲಿನ ಅಪರಾಧಿಯ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಮತ್ತು ಹೇಳಿಕೆಯಲ್ಲಿ ಬರೆದುಕೊಳ್ಳಲಾಯಿತು. ಈ ಹೇಳಿಕೆಯನ್ನು ಪೂರ್ಣ ಮತ್ತು ಅವನು/ಅವಳು ಹೇಳಿದ ಹೇಳಿಕೆಯೇ ಇರುತ್ತದೆ. ಸದರಿ ಹೇಳಿಕೆಯನ್ನು ಅವನ/ಅವಳ ಭಾಷೆಯಲ್ಲಿ ಓದಿ ಹೇಳಿ ತಿಳಿಸಿ ಬರೆದುಕೊಳ್ಳಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ)

ಹೆಚ್.ಬಿ.ಹಳ್ಳಿ

ದಿನಾಂಕ ಃ - -2018

(ವಿಜಯ್ ಕುಮಾರ್.ಎಸ್.ಜಟ್ಲಾ)
ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಹ ಬೊ ಹಳ್ಳಿ.